ಹರಿಜನ ಗಿರಿಜನಗಳಿಗೆ ಜಮೀನು ವಿತರಣೆ

4741 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಂತಾಮಣಿ ಕ್ಷೇತ್ರದಲ್ಲಿ ಹರಿಜನ ಗಿರಿಜನರಿಗೆ ಜಮೀನು ಮಂಜೂರು ಮಾಡಲು ಖಾಸಗಿಯವರಿಂದ ಖರೀದಿ ಮಾಡಿ ವಿತರಿಸಲು ಬಂದಿರುವ ಅರ್ಜಿಗಳೆಷ್ಟು?*

ಆ) *ಈ ಪೈಕಿ ಎಷ್ಟು ಅರ್ಜಿ ವಿಲೇವಾರಿಯಾಗಿವೆ? ಇದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?*

ಇ) *ವ್ಯಕ್ತಿಗತ ಕೊಳವೆಬಾವಿಗಳಿಗಾಗಿ ಬಂದಿರುವ ಅರ್ಜಿಗಳು ಎಷ್ಟು? ಈ ಪೈಕಿ ಮಂಜೂರಾತಿಯಾದ ಕೊಳವೆಬಾವಿಗಳಾವುವು?*

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಚಿಂತಾಮಣಿ ಕ್ಷೇತ್ರದಲ್ಲಿ ಹರಿಜನ ಗಿರಿಜನರಿಗೆ ಜಮೀನು ಮಂಜೂರು ಮಾಡಲು ಜಮೀನು ಖರೀದಿ ಮಾಡುವಂತೆ ಖಾಸಗಿಯವರಿಂದ 2000-01ನೇ ಸಾಲಿನಲ್ಲಿ 19 ಅರ್ಜಿಗಳು ಬಂದಿರುತ್ತವೆ.

ಆ) 2 ಅರ್ಜಿ ವಿಲೇವಾರಿಯಾಗಿವೆ. ರೂ.32,946-00 ಬಿಡುಗಡೆ ಮಾಡಲಾಗಿದೆ.

ಇ) ವ್ಯಕ್ತಿಗತ ಕೊಳವೆಬಾವಿಗಳಿಗಾಗಿ ಚಿಂತಾಮಣಿ ಕ್ಷೇತ್ರದಲ್ಲಿ 29 ಪರಿಶಿಷ್ಟ ಜಾತಿಯ ಅರ್ಜಿಗಳು, 21 ಪರಿಶಿಷ್ಟ ವರ್ಗಕ್ಕೆ ಸೇರಿದ ಒಟ್ಟು 50 ಅರ್ಜಿಗಳು ಬಂದಿವೆ. ಚಿಂತಾಮಣಿ ಕ್ಷೇತ್ರಕ್ಕೆ ಈ ಸಾಲಿಗೆ 2 ಪರಿಶಿಷ್ಟ ಜಾತಿಗೆ ಹಾಗೂ 1 ಪರಿಶಿಷ್ಟ ವರ್ಗಕ್ಕೆ ಕೊಳವೆಬಾವಿಗಳ ಗುರಿ ನಿಗದಿಪಡಿಸಿದೆ.

ಕೈಮಗ್ಗ ನೇಕಾರರಿಗೆ ವಸತಿ ಮನೆಗಳ ನಿರ್ಮಾಣ

4742 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ರೇಷ್ಮೆ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ರವರು ಚಿಂತಾಮಣಿ (ಸ್ಪಾರ್ಪಲ್ ಗಡಿ) ಯಲ್ಲಿ ಸುಮಾರು 10 ಎಕರೆ ಜಮೀನು 1994ರಲ್ಲಿ ಸರ್ಕಾರದಿಂದ ವಶಪಡಿಸಿಕೊಂಡು ಕೈಮಗ್ಗ ನೇಕಾರರಿಗೆ ವಸತಿ ಮತ್ತು ಕೈಮಗ್ಗ ಯಂತ್ರವನ್ನು ಹಾಕಿಕೊಡಲು ಮನೆಗಳನ್ನು ನಿರ್ಮಿಸಲು ಸರ್ಕಾರದ ಆಜ್ಞೆಯಾಗಿದೆಯೆಂದು ತಿಳಿಸಿ, ಆ ಜಾಗದಲ್ಲಿ ಮನೆಗಳನ್ನು ಕಟ್ಟಲು ಪ್ರಾರಂಭ ಮಾಡಲು ಅಡಿಗಲ್ ಹಾಕುವ ಸಮಾರಂಭವನ್ನು ಅಂದಿನ ಜವಳಿ ಮತ್ತು ರೇಷ್ಮೆ ಸಚಿವರು ಹಾಕಿರುವುದು ನಿಜವೆ?*

ಆ) *ಹಾಗಿದ್ದಲ್ಲಿ, ಇದುವರೆವಿಗೂ ಆ ಮೀಸಲಿದ್ದ ಜಾಗದಲ್ಲಿ ಯಾವುದೇ ತರಹ ಅಭಿವೃದ್ಧಿ ಕಾಣದೇ ಇರುವುದಕ್ಕೆ ಪ್ರಬಲ ಕಾರಣಗಳೇನು?*

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಹೌದು.

ಆ) ಕೇಂದ್ರ ಪುರಸ್ಕೃತ ಯೋಜನೆಯಡಿಯಲ್ಲಿ ವಸತಿ ಮತ್ತು ಕಾರ್ಯಾಗಾರವನ್ನು ಕಟ್ಟಿಸಲು ಆದೇಶ ಇಲ್ಲದ ಕಾರಣ ಈ ಜಾಗವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಲಿಲ್ಲ. ಈ ಜಾಗವನ್ನು ಅಭಿವೃದ್ಧಿಪಡಿಸಲು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವು ಕೈಮಗ್ಗ ಕೈಗಾರಿಕೆಯ ಸಮಗ್ರ ಅಭಿವೃದ್ಧಿ (Integrated development of handloom industry) (ಚಿಂತಾಮಣಿ) ಯೋಜನೆಗಾಗಿ ನಕ್ಷೆಯನ್ನು ಸಿದ್ಧಪಡಿಸಿ, ಯೋಜನಾ ವರದಿಯನ್ನು ವಿಶ್ವ ಯೋಜನೆಯಡಿ ಮಂಜೂರು ಮಾಡಲು ಸಲ್ಲಿಸಲಾಗಿತ್ತು. ಜಾಗವನ್ನು ಅಭಿವೃದ್ಧಿಗೊಳಿಸುವ ವೆಚ್ಚ ಮತ್ತು ವಸತಿ ಮತ್ತು ಕಾರ್ಯಾಗಾರ ನಿರ್ಮಾಣದ ವೆಚ್ಚವು ವಿಶ್ವ ಯೋಜನೆಯಡಿ ನಿಗದಿಪಡಿಸಿದ ವೆಚ್ಚಕ್ಕಿಂತ ಹೆಚ್ಚಾದ ಕಾರಣ ಈ ಯೋಜನೆಯನ್ನು ಮಂಜೂರು ಮಾಡಿರುವುದಿಲ್ಲ.

ಬೆಳ್ಳಿ ಬೆಳಕು ಯೋಜನೆ

4744 - ಶ್ರೀ ಹೆಚ್. ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ಬೆಳ್ಳಿ ಬೆಳಕು ಯೋಜನೆಯಡಿ ಉಡುಪಿ ಜಿಲ್ಲೆಯ ಯಾವ ಯಾವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ?

ಆ) ಬೆಳ್ಳಿ ಬೆಳಕು ಯೋಜನೆಯಡಿ ಆ ಗ್ರಾಮಗಳಲ್ಲಿ ನಿರ್ವಹಿಸಿದ ಕಾಮಗಾರಿಗಳು ಯಾವುವು?

ಇ) ಸದರಿ ಗ್ರಾಮಗಳಲ್ಲಿ ಫಲಾನುಭವಿಗಳಿಗೆ ಹಣ ಪಾವತಿ ಮಾಡಲಾಗಿದೆಯೇ?

ಈ) ಹಾಗಿಲ್ಲದಿದ್ದರೆ ಪಾವತಿಸಬೇಕಾದ ಹಣ ವೆಷ್ಟು? (ಗ್ರಾಮವಾರು ಮಾಹಿತಿ ಒದಗಿಸುವುದು)

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಕಾರ್ಕಳ ತಾಲ್ಲೂಕು, ಚಾರಾ ಗ್ರಾಮವನ್ನು ಬೆಳ್ಳಿ ಬೆಳಕು ಯೋಜನೆಯ ಅನುಷ್ಠಾನಕ್ಕೆ ಆಯ್ಕೆ ಮಾಡಲಾಗಿದೆ.

ಆ) 17 ಮನೆಗಳನ್ನು ಹೊಸದಾಗಿ ನಿರ್ಮಾಣ ಮಾಡಲು ಹಾಗೂ 11 ಮನೆಗಳ ದುರಸ್ಥಿಯನ್ನು ಕೈಗೊಳ್ಳಲಾಗಿದೆ.

ಇ) ಹಣವನ್ನು ನೇರವಾಗಿ ಫಲಾನುಭವಿಗಳಿಗೆ ಪಾವತಿ ಮಾಡಲು ಅವಕಾಶವಿರುವುದಿಲ್ಲ. ಈ ಕಾಮಗಾರಿಗಾರಿ ಈಗಾಗಲೇ 2 ಲಕ್ಷ ರೂ.ಗಳನ್ನು ಜಿಲ್ಲಾಧಿಕಾರಿಗಳಿಗೆ ಒದಗಿಸಲಾಗಿದೆ.

ಉ) ಉದ್ಭವಿಸುವುದಿಲ್ಲ.